ವರ್ಷ	ಕೊರೆದ ಕೊಳವೆ ಬಾವಿಗಳ ಸಂಖ್ಯೆ
2006–07	5439
2007–08	8582
2008–09	5161

ಆ) ವಿದ್ಯುಚ್ಛಕ್ತಿ ಪೂರೈಸಿದ ಕೊಳವೆಬಾವಿಗಳ ವಿವರ:

ವರ್ಷ	ವಿದ್ಯುಚ್ಛಕ್ತಿ ಪೂರೈಸಿದ ಕೊಳವೆ ಬಾವಿಗಳ ಸಂಖ್ಯೆ
2006–07	1566
2007–08	3915
2008–09	7884

ಅಲ್ಪಸಂಖ್ಯಾತರ ಇಲಾಖೆಯಿಂದ ಶಾದಿಮಹಲ್ ಮತ್ತು ಸಮುದಾಯ ಭವನ ನಿರ್ಮಿಸುವುದು

929 (1131) **ಶ್ರೀ ಶಿವಲಿಂಗೇಗೌಡ ಕೆ.ಎಂ (ಅರಸೀಕೆರೆ) :** ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಸಂಖ್ಯಾತರ ಇಲಾಖೆಯಲ್ಲಿ ಅಲ್ಪಸಂಖ್ಯಾತರಿಗೆ ಶಾದಿಮಹಲ್‌ಗಳ ಮತ್ತು ಸಮುದಾಯ ಭವನ ನಿರ್ಮಾಣಕ್ಕೆ ಈಗ ಜಾರಿಯಲ್ಲಿರುವ ನಿಯಮಗಳಾವುವು;

ಆ) ಈ ನಿಯಮಗಳನ್ನು ಸಡಿಲಿಸಲು ಸಾಧ್ಯವಿಲ್ಲವೇ (ಮಾಹಿತಿ ನೀಡುವುದು);

ಪ್ರೊ.ಡಾ॥ ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಅಲ್ಪಸಂಖ್ಯಾತರ ಶಾದಿಮಹಲ್/ಸಮುದಾಯ ಭವನ ನಿರ್ಮಾಣಕ್ಕೆ ಕೆಳಕಂಡ ನಿಯಮಗಳು ಜಾರಿಯಲ್ಲಿರುತ್ತವೆ.

1) ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಶಾದಿಮಹಲ್/ ಸಮುದಾಯ ಭವನ ನಿರ್ಮಾಣಕ್ಕೆ ಕನಿಷ್ಠ ರೂ.50.00 ಲಕ್ಷಗಳ ಅಂದಾಜು ಪಟ್ಟಿ ಸಲ್ಲಿಸಬೇಕು, ಜಿಲ್ಲಾ ಕೇಂದ್ರೇತರ ಸ್ಥಳದಲ್ಲಿ ಕನಿಷ್ಟ ರೂ. 20.00 ಲಕ್ಷ ಅಂದಾಜು ಪಟ್ಟಿ ಸಲ್ಲಿಸುವುದು.

2) ಅಂದಾಜು ಪಟ್ಟಿ ಮತ್ತು ನೀಲಿ ನಕಾಶೆಯನ್ನು ನೊಂದಾಯಿತ ಅಭಿಯಂತರು/ದೃಢೀಕೃತ ಅಭಿಯಂತರರು/ ಅನುಮೋದಿತ ಮೌಲ್ಯಮಾಪನಕಾರ ಪಡೆದ ಅಭಿಯಂತರರು ಅಥವಾ ಜಿಲ್ಲಾ ಪಂಚಾಯತ್ ಪರವಾನಿಗೆ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಅಥವಾ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳಿಂದ ದೃಢೀಕರಿಸಿರಬೇಕು.

3) ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರ ಸ್ವಯಂ ಸೇವಾ ಸಂಸ್ಥೆಗಳು;ಸಂಘಗಳು ಮಾತ್ರ ಅರ್ಹರು.

4) ಸಂಸ್ಥೆಯು ನೊಂದಣಿಯಾಗಿ ಕನಿಷ್ಟ 1 ವರ್ಷವಾಗಿರಬೇಕು.

5) ಸಂಸ್ಥೆಯ ಹೆಸರಿನಲ್ಲಿ ನಿವೇಶನವಿರಬೇಕು.

6) ಸಂಸ್ಥೆಗೆ ಮೊದಲನೇ ಕಂತಿನ ಅನುದಾನ ಬಿಡುಗಡೆಯಾದ 2 ವರ್ಷದೊಳಗಾಗಿ ಪೂರ್ಣಗೊಳಿಸಬೇಕು.

7) ಈ ರೀತಿ ನಿರ್ಮಿಸಿದ ಸಮುದಾಯಭವನ/ ಶಾದಿಮಹಲ್ ರಾಜಕೀಯ ಚಟುವಟಿಕೆಗಳಿಗೆ ಉಪಯೋಗಿಸಬಾರದು.

8) ಜಿಲ್ಲಾ ಕೇಂದ್ರದಲ್ಲಿ ನಿರ್ಮಿಸುವ ಸಮುದಾಯ ಭವನ/ ಶಾದಿಮಹಲ್ ಕೊನೆಯ ಪಕ್ಷ 500 ಜನರಿಗೆ ಸಾಕಾಗುವ ಹಾಲ್ ಹೊಂದಿರಬೇಕು, ಜಿಲ್ಲಾ ಕೇಂದ್ರೇತರ ಸ್ಥಳಗಳಲ್ಲಿ 200 ಜನರಿಗೆ ಸಾಕಾಗುವಷ್ಟು ಹಾಲ್ ಹೊಂದಿರಬೇಕು.

9) ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ನಿರ್ಮಿಸುವ ಶಾದಿಮಹಲ್/ ಸಮುದಾಯ ಭವನ ಗರಿಷ್ಠ ರೂ. 50.00 ಲಕ್ಷಗಳು ಮತ್ತು ಜಿಲ್ಲಾಕೇಂದ್ರೇತರ ಸ್ಥಳಕ್ಕೆ ಗರಿಷ್ಠ ರೂ.20.00 ಲಕ್ಷಗಳನ್ನು ಮಂಜೂರು ಮಾಡಲಾಗುವುದು.

ಆ) ಸಡಿಲಗೊಳಿಸಲಾಗುತ್ತಿದೆ.